**ಗ್ರಾಮ ಸಹಾಯಕರ ಸೇವೆ ಖಾಯಂಗೊಳಿಸುವುದು**

765(978) ಶ್ರೀ ಪಾಟೀಲ್ ಎ.ಎಸ್. (ನಡಹಳ್ಳಿ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ವಿಷಯಗಳನ್ನು ದಯವಿಟ್ಟು ತಿಳಿಸುವರೆ ;

ಅ) ಕಂದಾಯ ಇಲಾಖೆಯಲ್ಲಿ ಗ್ರಾಮ ಸಹಾಯಕರೆಂದು (ಡಿ ದರ್ಜೆ) ನೌಕರರು ಸೇವೆ ಸಲ್ಲಿಸುತ್ತಿದ್ದಾರೆಯೆ ;

ಆ) ಹಾಗಿದ್ದಲ್ಲಿ ಕಳೆದ ಎಷ್ಟು ವರ್ಷಗಳಿಂದ ರಾಜ್ಯದಲ್ಲಿ ಎಷ್ಟು ಜನ ಸೇವೆ ಸಲ್ಲಿಸುತ್ತಿದ್ದಾರೆ ;

ಇ) ಸದರಿ ಗ್ರಾಮ ಸಹಾಯಕರಿಗೆ ಸರ್ಕಾರ ಮಾಹೆಯಾನ ನೀಡಲಿರುವ ವೇತನವೆಷ್ಟು ; ಮತ್ತು ಅವರಿಗೆ ನೀಡಲಿರುವ ಸೇವಾ ಭದ್ರತೆ ಏನು ;

ಈ) ಸುದೀರ್ಘವಾಗಿ ಸೇವೆ ಸಲ್ಲಿಸುತ್ತಿರುವ ಗ್ರಾಮ ಸಹಾಯಕರನ್ನು ಖಾಯಂಗೊಳಿಸುವ ಪ್ರಸ್ತಾವನೆ ಸರ್ಕಾರದ ಮುಂದೆ ಇದೆಯೇ ;

ಉ) ಇಲ್ಲದಿದ್ದಲ್ಲಿ ಸದರಿ ನೌಕರರನ್ನು ಖಾಯಂಗೊಳಿಸದೆ ಇರಲು ಕಾರಣಗಳೇನು (ವಿವರ ನೀಡುವುದು) ?

ಶ್ರೀ ಜಿ. ಕರುಣಾಕರ ರೆಡ್ಡಿ (ಕಂದಾಯ ಸಚಿವರು) :

ಅ) ಹೌದು, ಆದರೆ ಇವರು ಡಿ ದರ್ಜೆ ನೌಕರರಲ್ಲ.

ಆ) ಪ್ರಸ್ತುತ ಕಾರ್ಯ ನಿರ್ವಹಿಸುತ್ತಿರುವವರ ಸಂಖ್ಯೆ : 9617.

ಇ) ಮಾಹೆಯಾನ ಮಿತವೇತನವಾಗಿ ರೂ. 3000ಗಳನ್ನು ನೀಡಲಾಗುತ್ತಿದೆ. ಇದನ್ನು ಹೆಚ್ಚಿಸುವ ಪ್ರಸ್ತಾವ ಸರಕಾರದ ಪರಿಗಣನೆಯಲ್ಲಿದೆ. ಈ ಹುದ್ದೆಗಳು ಮಾಸಿಕ ಮಿತವೇತನ ಹುದ್ದೆಗಳಾಗಿರುವುದರಿಂದ ಸೇವಾಭದ್ರತೆಯ ಪ್ರಶ್ನೆ ಉದ್ಭವಿಸುವುದಿಲ್ಲ.

ಈ) ಗ್ರಾಮ ಸಹಾಯಕರನ್ನು ಖಾಯಂಗೊಳಿಸಬೇಕೆಂಬ ಬಗ್ಗೆ ಸಂಘಗಳಿಂದ ಕೋರಿಕೆ ಬಂದಿದ್ದು ಇದನ್ನು ನಿಯಮಾನುಸಾರ ಪರಿಶೀಲಿಸಲಾಗುತ್ತಿದೆ.

ಉ) ಮಾನ್ಯ ಸರ್ವೋಚ್ಚ ನ್ಯಾಯಾಲಯವು ಗ್ರಾಮ ಸಹಾಯಕರನ್ನು ಸಕ್ರಮಗೊಳಿಸಲು ಅವಕಾಶವಿಲ್ಲ ಎಂದು ತೀರ್ಪಿದೆ. ಸರ್ಕಾರದ ಆದೇಶ ದಿನಾಂಕ : 10.7.2007ರಲ್ಲಿ ಆಡಳಿತಾತ್ಮಕ ಹಿತದೃಷ್ಟಿಯಿಂದ ಈ ಹುದ್ದೆಗಳನ್ನು

ಮಾಸಿಕ ಮಿತವೇತನದ ಆಧಾರದ ಮೇಲೆ ಖಾಯಂ ಆಗಿ ಮುಂದುವರೆಸಲಾಗಿರುತ್ತದೆ. ಗ್ರಾಮ ಸಹಾಯಕರು ಮಾಸಿಕ ಮಿತವೇತನದ ಮೇಲೆ ಕರ್ತವ್ಯ ನಿರ್ವಹಿಸುತ್ತಿದ್ದು ಅವರುಗಳಿಗೆ ವೃಂದ ಮತ್ತು ನೇಮಕಾತಿ ನಿಯಮಗಳನ್ನು ರಚನೆ ಮಾಡದೇ ಇರುವುದರಿಂದ ಖಾಯಂಗೊಳಿಸಲು ಬರುವುದಿಲ್ಲ.

**ಡೋಣಿ ನದಿ ಹೂಳೆತ್ತುವುದು**

766(1100) ಶ್ರೀ ಪಾಟೀಲ ಎ.ಎಸ್. (ದೇವರ ಹಿಪ್ಪರಗಿ) : ಮಾನ್ಯ ಜಲಸಂಪನ್ಮೂಲ ಸಚಿವರು ಈ ಕೆಳಕಂಡ ವಿಷಯಗಳನ್ನು ದಯವಿಟ್ಟು ತಿಳಿಸುವರೆ :

ಅ) ಪ್ರತಿ ವರ್ಷ ಬಿಜಾಪುರ ಜಿಲ್ಲೆಯಲ್ಲಿ ಡೋಣಿ ನದಿ ಪ್ರವಾಹದಿಂದ ಅಪಾರ ಹಾನಿಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಆ) ಬಿಜಾಪುರ ಜಿಲ್ಲೆಯಲ್ಲಿ ಡೋಣಿ ನದಿ ಎಷ್ಟು ಕಿ.ಮೀ.ವರೆಗೆ ಹಾಯ್ದು ಹೋಗುತ್ತದೆ ಮತ್ತು ಇದರ ಉದ್ದ ಅಗಲಗಳೆಷ್ಟು ಹಾಗೂ ಈ ನದಿಯ ದಂಡೆಯಲ್ಲಿರುವ ಅಕ್ಕಪಕ್ಕದ ಗ್ರಾಮಗಳು ಯಾವುವು ;

ಇ) ಸದರಿ ಡೋಣ ನದಿ ಹೂಳೆತ್ತುವ ಪ್ರಸ್ತಾವನೆ ಈಗ ಯಾವ ಹಂತದಲ್ಲಿದೆ (ವಿವರ ನೀಡುವುದು) ;

ಈ) ಸದರಿ ನದಿ ಹೂಳೆತ್ತುವ ಕಾರ್ಯವನ್ನು ಯಾವ ಇಲಾಖೆಯಿಂದ ಕೈಗೆತ್ತಿಕೊಳ್ಳಲಾಗುತ್ತಿದೆ ?

ಶ್ರೀ ಬಸವರಾಜ್ ಬೊಮ್ಮಾಯಿ (ಜಲಸಂಪನ್ಮೂಲ ಸಚಿವರು) :

ಅ) ಹೌದು.

ಆ) ಬಿಜಾಪುರ ಜಿಲ್ಲೆಯಲ್ಲಿ ಡೋಣಿ ನದಿಯು ಸುಮಾರು 158 ಕಿ.ಮೀ.ವರೆಗೆ ಹಾಯ್ದು ಹೋಗುತ್ತದೆ. ಇದರ ಉದ್ದ 194 ಕಿ.ಮೀ. ಹಾಗೂ ಅಗಲ 40 ರಿಂದ 120 ಕಿ.ಮೀ.

ಈ ನದಿಯ ದಂಡೆಯಲ್ಲಿರುವ ಅಕ್ಕಪಕ್ಕದ ಗ್ರಾಮಗಳ ವಿವರ ಈ ಕೆಳಕಂಡಂತಿವೆ :